P and SC No. 02/2017

RW 03 (ಅಂಬಿಕಾ ಕೆ)

ದಿನಾಂಕಃ 07.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ – ಹೆಚ್ ವಿ ವಕೀಲರಿಂದ.

2002 ರಲ್ಲಿ ನನ್ನ ಹಾಗೂ ಮೃತ ಚನ್ನಬಸಪ್ಪ ಅವರ ಮದುವೆ ನಡೆದಿರುತ್ತದೆ, ಆದರೆ ದಿನಾಂಕ ನನಗೆ ನೆನಪಿಲ್ಲ. ಈಗ ನನಗೆ 38 ವರ್ಷ ವಯಸ್ಸು. ಮದುವೆ ಸಮಯದಲ್ಲಿ ಚನ್ನಬಸಪ್ಪನವರಿಗೆ ಅಂದಾಜು 42-43 ವಯಸ್ಸು ಇತ್ತು. ನನಗೂ ಚನ್ನಬಸಪ್ಪನವರಿಗೆ 25 ವರ್ಷಗಳ ಅಂತರವಿದೆ ಎಂದರೆ ಅದೆಲ್ಲ ನನಗೆ ಗೊತ್ತಿಲ್ಲ, ನಮ್ಮ ಮನೆಯ ಹಿರಿಯರು ನೋಡಿ ಮದುವೆ ಮಾಡಿರುತ್ತಾರೆ. ನಮ್ಮ ಮದುವೆ ನಂದಿಹಳ್ಳಿಯ ದೇವಸ್ಥಾನದಲ್ಲಿ ಆಗಿರುತ್ತದೆ. ಈ ಮದುವೆಯ ಕುರಿತಂತೆ ಮದುವೆ ಆಮಂತ್ರಣ ಪತ್ರ, ಭಾವಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಹಡಗಲಿ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ.

ಮೃತ ಚನ್ನಬಸಪ್ಪ ಅಂಗವಿಕಲರಾಗಿದ್ದರು ಎಂದರೆ ಹೌದು. ಅವರಿಗೆ ಕೈ-ಕಾಲು ಮಡಿಚಲು ಬರುತ್ತಿರಲಿಲ್ಲ ಎಂದರೆ ಬರುತ್ತಿತ್ತು. ಅವರು ಯಾವಾಗ ನಿವೃತ್ತಿ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಸ್ವಯಂ ನಿವೃತ್ತಿ ಹೊಂದಿರುತ್ತಾರೆ. ಮದುವೆಯ ನಂತರ ನಾವು ಕೊಟ್ಟೂರಿನಲ್ಲಿ ವಾಸವಾಗಿದ್ದೆವು. ನಾವು 3 ವರ್ಷ ಚೆನ್ನಾಗಿದ್ದು, ಅನಂತರ ಅವರು ನನ್ನನ್ನು ಹೊಡೆದು ಹೊರಹಾಕಿದ ನಂತರ ಹಗರಿಬೊಮ್ಮನಹಳ್ಳಿಯಲ್ಲಿ ನನ್ನನ್ನು ಕರೆದುಕೊಂಡು ಹೋಗಿ ವಾಸವಾಗಿದ್ದರು. ಅಲ್ಲಿ ಒಂದು ವರ್ಷ ಜೊತೆಯಲ್ಲಿದ್ದೆವು. ಅನಂತರ ಅವರು ಚಿಕಿತ್ಸೆಗೆಂದು ಕೊಟ್ಟೂರಿನ ಅವರ ಅಪ್ಪ-ಅಮ್ಮ ಅವರ ಬಳಿ ಹೋಗಿರುತ್ತಾರೆ. ನನ್ನ ಸ್ವಂತ ಊರು ನಂದಿಹಳ್ಳಿ. ಮೃತ ಚನ್ನಬಸಪ್ಪ ಕೊಟ್ಟೂರಿನವರು.

ನಾನು ನನ್ನ ಆಧಾರ್ ಕಾರ್ಡ, ರೇಷನ್ ಕಾರ್ಡನ್ನು ನಂದಿಹಳ್ಳಿ ಗ್ರಾಮದಲ್ಲಿ ಮಾಡಿಸಿರುತ್ತೇನೆ. ಅವುಗಳು ಕೊಟ್ಟೂರು ವಿಳಾಸದಲ್ಲಿ ಇಲ್ಲ ಎಂದರೆ ಹೌದು, ನಾವು ಮಾಡಿಸಿರುವುದಿಲ್ಲ.

ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.